# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ/9257/2017/ಡಿ.ಆರ್.ಇ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ: 03/11/2020.

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (1) ಅನ್ವಯ ವರದಿ*

ವಿಷಯ: ಚಿತ್ರದುರ್ಗ ಜಿಲ್ಲೆಯ ನೃಪತುಂಗ ಬಡಾವಣೆಯ ಸೈಟ್ ನಂ.57ರಲ್ಲಿ 10 ಅಡಿಗಳಷ್ಟು ರಸ್ತೆಯನ್ನು ಒತ್ತುವರಿ ಮಾಡಿ ರಸ್ತೆಯ ಮಧ್ಯಭಾಗದಲ್ಲಿ ಶೌಚಾಲಯದ ಮತ್ತು ಚರಂಡಿಯ ಇಂಗುಗುಂಡಿ ನಿರ್ಮಿಸಿದ್ದು ಸದರಿ ಒತ್ತುವರಿಯನ್ನು ತೆರವುಗೊಳಿಸುವ ಕುರಿತು.

****

ಶ್ರೀಮತಿ ಕೆ.ಎಲ್. ನಾಗಲತಾ, ಗಂಡ ಬಿ.ಎನ್. ನಾಗೇಂದ್ರರಾವ್, ಧನವಂತರಿ ನಿಲಯ, ನೃಪತುಂಗಾ ಬಡಾವಣೆ, ಬ್ಯಾಂಕ್ ಕಾಲೋನಿ, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದು "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಎದುರುದಾರರಾದ (1) ಶ್ರೀಮತಿ ಚೈತ್ರ, ಪಿ.ಡಿ.ಓ., ಮದಕರಿಪುರ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (2) ಶ್ರೀಮತಿ ವಿಶಾಲಾಕ್ಷಿ, ಕಾರ್ಯದರ್ಶಿಗಳು, ಮದಕರಿಪುರ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (3) ಶ್ರೀಮತಿ ಜಯಶೀಲಾ, ಪಿ.ಡಿ.ಓ., ಮದಕರಿಪುರ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ, (4) ಶ್ರೀ ತಿಪ್ಪೇಸ್ವಾಮಿ, ಕಾರ್ಯದರ್ಶಿಗಳು, ಮದಕರಿಪುರ ಗ್ರಾಮ ಪಂಚಾಯತಿ,

ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ಮತ್ತು (5) ಶ್ರೀ ಸತೀಶ್ ರೆಡ್ಡಿ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ಚಿತ್ರುದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಇನ್ನು ಮುಂದೆ "ಎದುರುದಾರ ನಂ. 1 ರಿಂದ 5" ಎಂದು ಕರೆಯಲ್ಪಡುತ್ತಾರೆ), ರವರ ವಿರುದ್ದ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **<u>ದೂರಿನ ಸಂಕ್ಷಿಪ್ತ ವಿವರಣೆ</u>:–**

ಚಿತ್ರದುರ್ಗದ ನೃಪತುಂಗ ಬಡಾವಣೆಯ ಸೈಟ್ ನಂ.57ರಲ್ಲಿ ದೂರುದಾರರು ಮನೆ ಕಟ್ಟಿರುತ್ತಾರೆ. ಅವರ ಮನೆಯ ಮುಂಭಾಗದ ರಸ್ತೆಯನ್ನು ಮೇದೆಹಳ್ಳಿ ಗ್ರಾಮ ಪಂಚಾಯತಿ ಅಮೋಘ ಲೇಔಟಿನ ಶ್ರೀ ಶಂಕರ ತಾತಯ್ಯ ಎಂಬುವವರು 10 ಅಡಿಗಳಷ್ಟು ರಸ್ತೆಯನ್ನು ಒತ್ತುವರಿ ಮಾಡಿ ರಸ್ತೆಯ ಮಧ್ಯಭಾಗದಲ್ಲಿ ಶೌಚಾಲಯದ ಮತ್ತು ಚರಂಡಿಯ ಇಂಗುಗುಂಡಿ ನಿರ್ಮಿಸಿದ್ದಾರೆ. ಮೇದೆಹಳ್ಳಿಯ ಸದರಿ ಲೇಔಟಿನವರಿಗೆ ಅವರದೇ ಆದ ಪ್ರತ್ಯೇಕ ರಸ್ತೆ ಹಾಗೂ ಚರಂಡಿಯ ವ್ಯವಸ್ಥೆ ಇರುತ್ತದೆ. ಹೀಗಿದ್ದರೂ ಸಹ ಆ ಭಾಗದ ಚರಂಡಿಯನ್ನು ಮುಚ್ಚಿ ಸದರಿ ಲೇಔಟಿನ ಮನೆಗಳವರು 30 ಅಡಿ ರಸ್ತೆಯನ್ನು ಅಗೆದು ನೃಪತುಂಗ ಬಡಾವಣೆಯ ಮನೆಗಳ ಕಡೆ ಚರಂಡಿ ನೀರನ್ನು ಬಿಡುತ್ತಿರುವ ಪರಿಣಾಮ ದೂರುದಾರರ ಮನೆಯ ಪಾಯಕ್ಕೆ ತೊಂದರೆಯಾಗಿದ್ದು, ಈ ವಿಷಯವಾಗಿ ಎದುರುದಾರರಿಗೆ ಮೇಲಿಂದ ಮೇಲೆ ಅರ್ಜಿ ಕೊಟ್ಟರೂ ಸಹ, ಮೇಲ್ಕಂಡ ರಸ್ತೆಯಲ್ಲಿ ಆಗಿರುವ ಒತ್ತುವರಿಯನ್ನು ತೆರವು ಮಾಡದೆ ಎದುರುದಾರರು ಕರ್ತವ್ಯಲೋಪ ಎಸಗಿರುವುದರಿಂದ, ಅವರ ವಿರುದ್ಧ ಕಾನೂನಿನ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

3. ಎದುರುದಾರ ನಂ.1 ರಿಂದ 5 ಇವರುಗಳು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಲಾಯಿತು.

4. ಎದುರುದಾರ ನಂ.1 ಇವರ ಪ್ರಕಾರ ದೂರುದಾರರು ಮದಕರಿಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ರಿ.ಸ.ನಂ. 59/4ರಲ್ಲಿ ವಿಂಗಡಿಸಿರುವ ನಿವೇಶನ ಸಂಖ್ಯೆ:57 ಮತ್ತು ಅದರ ಖಾತೆ ಸಂಖ್ಯೆ:2120 ಹೊಂದಿರುತ್ತಾರೆ. ದೂರಿನಲ್ಲಿ ರಸ್ತೆ ಒತ್ತುವರಿ ಮಾಡಿರುವುದಾಗಿ ತಿಳಿಸಿರುವ ಶ್ರೀ ಶಂಕರ ತಾತಯ್ಯ ಇವರ ಸ್ವತ್ತು ಮೇದೆಹಳ್ಳಿ ಗ್ರಾಮ ಪಂಚಾಯತಿಗೆ ಸೇರಿದ್ದು ಮತ್ತು ರಿ.ಸ.ನಂ.59/4ರ ನಿವೇಶನಗಳ ನಕ್ಷೆಯನ್ನು ಪರಿಶೀಲಿಸಲಾಗಿ ದೂರುದಾರರ ಮನೆ ಎದುರಿನ ರಸ್ತೆಯ ಅರ್ಧಭಾಗ ಪಕ್ಕದ ಮೇದೆಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಖಾತೆ ತೆರೆದಿರುವ ರಿ.ಸ.ನಂಬರಕ್ಕೆ ಸೇರಿರುತ್ತದೆ. ಆದ್ದರಿಂದ, ಮೇದೆಹಳ್ಳಿ ಗ್ರಾಮ ಪಂಚಾಯತಿಯ ಪಿ.ಡಿ.ಓ. ಇವರಿಗೆ ಈ ಕುರಿತಂತೆ ತಿಳಿಸಿದಾಗ, ಅವರು ಶಂಕರ ತಾತಯ್ಯ ಇವರಿಗೆ ಈಗಾಗಲೇ ಕಾಂಪೌಂಡ್ ತೆರವು ಮಾಡುವಂತೆ ದಿನಾಂಕ: 28/04/2015ರಂದು ನೋಟಿಸು ನೀಡಿರುವ ಕುರಿತು ಹಾಗೂ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಕೋರ್ಟಿನಲ್ಲಿ ಕೇಸ್ ನಡೆಯುತ್ತಿರುವ ಬಗ್ಗೆ ತಿಳಿಸಿರುತ್ತಾರೆ. ಮೇಲ್ಕಂಡ ವಿಷಯದ ಬಗ್ಗೆ ಮದಕರಿಪುರ ಹಾಗೂ ಮೇದೆಹಳ್ಳಿ ಗ್ರಾಮ ಪಂಚಾಯತಿಯಿಂದ ಜಂಟಿ ಕಾರ್ಯಾಚರಣೆ ನಡೆಯಬೇಕಾಗಿದ್ದು ಮತ್ತು ಕೊರ್ಟಿನಲ್ಲಿ ಕೇಸ್ ನಡೆಯುತ್ತಿರುವುದರಿಂದ ಯಾವುದೇ ಕ್ರಮ ಕೈಗೊಳ್ಳಲು ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

5. ಎದುರುದಾರ ನಂ.2 ಇವರ ಆಕ್ಷೇಪಣೆಯ ಪ್ರಕಾರ ಮದಕರಿಪುರ ಗ್ರಾಮ ಪಂಚಾಯತಿಗೆ ಸಂಬಂಧಪಟ್ಟಂತೆ ಅವರ ಕರ್ತವ್ಯದ ಕೊನೆಯ ದಿನಾಂಕ: 08/07/2017 ಆಗಿರುವುದರಿಂದ ಪ್ರಸ್ತತ ಪ್ರಕರಣದ ಕುರಿತು ತಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

6. ಎದುರುದಾರ ನಂ.3 ಇವರ ಪ್ರಕಾರ ಶ್ರೀ ಶಂಕರ ತಾತಯ್ಯ ಇವರು ರಸ್ತೆ ಒತ್ತುವರಿ ಮಾಡಿಕೊಂಡಿರುವುದನ್ನು ತೆರವುಗೊಳಿಸಲು ದಿನಾಂಕ: 10/07/2017ರಂದು ದೂರುದಾರರು ಮೇದೆಹಳ್ಳಿ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ ಪ್ರಯುಕ್ತ, ದಿನಾಂಕ: 25/07/2017ರಂದು ಸದರಿ ಪಂಚಾಯತಿಯ ಲೆಕ್ಕ ಸಹಾಯಕರಾದ ತಿಪ್ಪೇಸ್ವಾಮಿ ಇವರಿಗೆ ಸ್ಥಳ ಪರಿಶೀಲನೆ ಮಾಡಲು ಮೌಖಿಕವಾಗಿ ಆದೇಶಿಸಿದ ಕುರಿತು ಮತ್ತು ದಿನಾಂಕ: 26/07/2017ರಂದು ಶ್ರೀ ಶಂಕರ ತಾತಯ್ಯ ಇವರಿಗೆ ಮೇದೆಹಳ್ಳಿ ಗ್ರಾಮ ಪಂಚಾಯತಿಯಿಂದ ನೋಟೀಸು ನೀಡಿರುವ ಕುರಿತು ಹಾಗೂ ಸದರಿ ವ್ಯಕ್ತಿ ಮೇದೆಹಳ್ಳಿ ಗ್ರಾಮ ಪಂಚಾಯತಿಯ ವಿರುದ್ಧ ಸ್ಥಳೀಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ಕೋರ್ಟ್‌ನಿಂದ ತಡೆಯಾಜ್ಞೆ ತಂದಿರುವುದರಿಂದ ಯಾವುದೇ ಕ್ರಮವಹಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ.

7. ಎದುರುದಾರ ನಂ.4ರ ಪ್ರಕಾರ ಮದಕರಿಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ರಿ.ಸ.ನಂ.59/4ರಲ್ಲಿ ದೂರುದಾರರು ನಿವೇಶನ ಸಂಖ್ಯೆ:57 ಮತ್ತು ಅದರ ಖಾತಾ ಸಂಖ್ಯೆ:2120ನ್ನು ಹೊಂದಿರುತ್ತಾರೆ. ದೂರಿನಲ್ಲಿ ಆಪಾದಿಸಿರುವಂತೆ ಶ್ರೀ ಶಂಕರ ತಾತಯ್ಯ ಇವರು ಒತ್ತುವರಿ ಮಾಡಿದ್ದಾರೆ ಎನ್ನಲಾಗುವ ರಸ್ತೆ ಮೇದೆಹಳ್ಳಿ ಗ್ರಾಮ ಪಂಚಾಯತಿಗೆ ಸೇರುತ್ತದೆ. ಪಿ.ಡಿ.ಓ. ಇವರ ಆದೇಶದ ಮೇರೆಗೆ ದಿನಾಂಕ: 25/07/2017ರಂದು ಸ್ಥಳ ಪರಿಶೀಲನೆ ಮಾಡಲಾಗಿ, ಶ್ರೀ ಶಂಕರ ತಾತಯ್ಯರವರು ರಸ್ತೆ ಒತ್ತುವರಿ ಮಾಡಿದ್ದು ಕಂಡುಬಂದಿರುತ್ತದೆ ಮತ್ತು ಆ ವಿಷಯವನ್ನು ಸ್ಥಳ ಪರಿಶೀಲನಾ ವರದಿ ಸಮೇತ ಪಿ.ಡಿ.ಓ. ಇವರ ಗಮನಕ್ಕೆ ತರಲಾಗಿದ್ದು ಹಾಗೂ ಸದರಿ ವ್ಯಕ್ತಿಗೆ ದಿನಾಂಕ: 26/07/2017ರಂದು ನೋಟೀಸು ನೀಡಿರುವ ಕುರಿತು ತಿಳಿಸಿರುತ್ತಾರೆ.

8. ಎದುರುದಾರ ನಂ.5ರ ಪ್ರಕಾರ ದೂರುದಾರರು ದೂರಿನಲ್ಲಿ ಕೇಳಿಕೊಂಡಿರುವ ಸಮಸ್ಯೆಯನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರನ್ವಯ ನಿಯಮಾನುಸಾರ ನಿವಾರಿಸಿಕೊಡಬೇಕೆಂದು ಮೇದೆಹಳ್ಳಿ ಮತ್ತು ಮದಕರಿಪುರ ಗ್ರಾಮ ಪಂಚಾಯತಿಯ ಪಿ.ಡಿ.ಓ. ಇವರಿಗೆ ಪತ್ರ ಬರೆದು ಸೂಚಿಸಿರುವುದಾಗಿ ಹೇಳಿರುತ್ತಾರೆ.

9. ದಾಖಲೆಗಳ ಪ್ರಕಾರ ಓ.ಎಸ್. 271/2017 ಇದನ್ನು ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಚಿತ್ರದುರ್ಗ ಇವರಲ್ಲಿ ದಾಖಲ್ ಆದದ್ದು ನಿಜ, ಆದರೆ, ಅದರಲ್ಲಿ ಪಂಚಾಯತಿಯ ವಿರುದ್ಧ ಯಾವುದೇ ಮಧ್ಯಂತರ ಆದೇಶವನ್ನು ಮಾಡಿರುವುದಿಲ್ಲ ಮತ್ತು ಸದರಿ ದಾವೆ ದಿನಾಂಕ: 16/09/2019 ರಂದು 'dismissed for non prosecution' ಎಂದು ವಜಾಗೊಂಡರೂ ಆಪಾದಿತ ಒತ್ತುವರಿಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ, 1993, ಕಲಂ 72ರ ಅಡಿಯಲ್ಲಿ ಪ್ರದತ್ತವಾದ ಕಾನೂನು ರಿತ್ಯ ಎದುರುದಾರರು ತೆರವುಗೊಳಿಸದೆ ಇರುವುದರಿಂದ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ.

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಚಿತ್ರದುರ್ಗದ ನೃಪತುಂಗ ಬಡಾವಣೆಯ ಸೈಟ್ ನಂ.57ರಲ್ಲಿ 10 ಅಡಿಗಳಷ್ಟು ರಸ್ತೆಯನ್ನು ಒತ್ತುವರಿ ಮಾಡಿ ರಸ್ತೆಯ ಮಧ್ಯಭಾಗದಲ್ಲಿ ಶೌಚಾಲಯದ ಮತ್ತು ಚರಂಡಿಯ ಇಂಗುಗುಂಡಿ ನಿರ್ಮಿಸಿದ್ದು ಅದನ್ನು ತೆರವುಗೊಳಿಸುವ ಕುರಿತು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಒತ್ತುವರಿ ತೆರವು ಮಾಡುವ ಮೊದಲು ಒತ್ತುವರಿದಾರರಿಗೆ ತಮ್ಮ ವಿವರಣೆಯನ್ನು ಸಲ್ಲಿಸಲು ಅವಕಾಶಕೊಟ್ಟು, ನಂತರ ಕಾನೂನಿನ ಪ್ರಕಾರ ಒತ್ತುವರಿ ತೆರವು ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗಾಗಿ** ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

4-11-20

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ.